ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು) :

ಅ) 1995ರಲ್ಲಿ ಸರ್ಕಾರವು ಈ ಗಿರಣಿಗಳನ್ನು ಈಗಾಗಲೇ ಸಮಾಪನೆ ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಿರೇಕೆರೂರು ಪಟ್ಟಣ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು

1936 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಪಟ್ಟಣ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು ಎಷ್ಟು? ಅವರುಗಳ ಹೆಸರು, ಅವರುಗಳಿಗೆ ಪ್ರತಿ ತಿಂಗಳು ಕೊಡುತ್ತಿರುವ ವೇತನ ಎಷ್ಟು?

ಆ) ಅವರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಕೊಡುತ್ತಿರುವ ವೇತನ ಪದ್ಧತಿಯಂತೆ ವೇತನ ಕೊಡಲು ಸರ್ಕಾರವು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) 13

1. ಡಿ. ನಾಗರಾಜ
2. ದುರಗುಪ್ಪ ಗೊಣೆಪ್ಪ, ಬೋಗಾವಿ
3. ಭರಮಪ್ಪ ಚ. ಹರಿಜನ
4. ಕೆಂಚಪ್ಪ, ಹರಿಜನ
5. ಪರಶುರಾಮ ಹರಿಜನ
6. ನಾಗರಾಜ ಕಡಪ
7. ಸುಭಾಸ್, ಹರಿಜನ
8. ದುರುಗಪ್ಪ ಮುಗಳಿಹಳ್ಳಿ
9. ಚಂದ್ರಪ್ಪ, ಹರಿಜನ
10. ದುರುಗಪ್ಪ ಮುದಿಯಣ್ಣನವರು
11. ಜಿ.ಕೆ. ಪಾಟೀಲ
12. ಚಂದ್ರಪ್ಪ ಹ. ದಾಸನಕೊಪ್ಪ
13. ನಾಗರಾಜ ಮಾಳಿ

ಕ್ರ.ಸಂ. 1 ಮತ್ತು 2ನೇದ್ದವರಿಗೆ ಪ್ರತಿ ತಿಂಗಳು ರೂ. 900.00 ಹಾಗೂ ಕ್ರ.ಸಂ. 12 ರಿಂದ 13ರವರೆಗೆ ಪ್ರತಿ ತಿಂಗಳು ರೂ. 500.00 ರೂ.800.00 ವೇತನ ನೀಡಲಾಗುತ್ತಿದೆ.

ಆ) ಸದರಿ ನೌಕರರು ಮಂಡಲ ಪಂಚಾಯತಿಯಿಂದ ಪರಿವರ್ತಿತ ಪಟ್ಟಣ ಪಂಚಾಯತಿಗೆ ಬಂದ ನೌಕರರಾಗಿರುತ್ತಾರೆ. ಅದರ ಪ್ರಕಾರ ಸದರಿ ನೌಕರ ಮಂಡಲ ಪಂಚಾಯತಿಯಲ್ಲಿ ರೂ. 400.00ಗಳ ವೇತನ ಕೊಡುತ್ತಿದ್ದು ಪಟ್ಟಣ ಪಂಚಾಯತಿ ಆದ ಮೇಲೆ ರೂ. 800.00 ಹಾಗೂ ರೂ. 900.00 ವೇತನವನ್ನು ನೀಡಲಾಗುತ್ತಿದೆ. ಸದರಿಯವರಿಗೆ ನಿಗದಿತ ವೇತನವನ್ನು ನೀಡಲಾಗುತ್ತಿದೆ.